ಸ್ಥಾಪಿಸಲಾಗಿದೆ; ಒಂದು ವೇಳೆ ಸ್ಥಾಪಿಸದಿದ್ದಲ್ಲಿ, ಈ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಠಾಣೆಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ; ಯಾವಾಗ ಈ ಠಾಣೆಗಳನ್ನು ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕಳೆದ ಮೂರುವರೆ ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಿದ 33 ಕೆ.ವಿ. ಸಬ್ ಸ್ಟೇಷನ್‌ಗಳ ಸಂಖ್ಯೆ 3

ಈ ಸಬ್ ಸ್ಟೇಷನ್‌ಗಳನ್ನು (1) ಭೂಸ್ಗಾ (2) ಚಿಮಕೋಟ್ ಮತ್ತು (3) ಬಗ್ದಲ್ ಗ್ರಾಮಗಳಲ್ಲಿ ಸ್ಥಾಪಿಸಲಾಗಿದೆ.

ಆ) ಇದೇ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಕೆಳಕಂಡ ಗ್ರಾಮಗಳಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪನೆಗಾಗಿ ಪ್ರಸ್ತಾವನೆಗಳು ಬಾಕಿ ಇದ್ದವು.

1. ಹುಲಸೂರು ವಿಧಾನಸಭಾ ಕ್ಷೇತ್ರ	1. ಮುಂಚಲಾಂಬಾ 2. ಮೆಹಕರ 3. ಕಟಕ್ ಚಿಂಚೋಳಿ
2. ಹುಮನಾಬಾದ ವಿಧಾನ ಸಭಾ ಕ್ಷೇತ್ರ	1. ಬೀಮಳ ಖೇಡಾ 2. ಘಾಟ್ ಬೋರಾಳ್
3. ಔರಾದ ವಿಧಾನ ಸಭಾ ಕ್ಷೇತ್ರ	1. ಖೇರಡಾ.ಬಿ.

ಉಳಿದ 3 ವಿಧಾನ ಸಭಾ ಕ್ಷೇತ್ರಗಳಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪನೆಗೆ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.

ಇ) ಹುಲ್ಸೂರಿನಲ್ಲಿ ವಿದ್ಯುತ್ ಸರಬರಾಜು ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪೆನಿಯ ಗಮನಕ್ಕೆ ಬಂದಿದೆ. ಹುಲುಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮೇಲ್ಕಂಡ ಅವಧಿಯಲ್ಲಿ 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪನೆಯಾಗಿರುವುದಿಲ್ಲ. ಈ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮುಚಲಾಂಬ, ಮೆಹಕರ ಮತ್ತು ಕಟಕ್ ಚಿಂಚೋಳಿಗಳಲ್ಲಿ 33 ಕೆ.ವಿ. ಸಬ್ ಸ್ಟೇಷನ್ನುಗಳ ಸ್ಥಾಪನೆಗೆ ಪ್ರಸ್ತಾವನೆಗಳು ಇವೆ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪೆನಿಯು ಈ ವಿದ್ಯುತ್ ಸಬ್ ಸ್ಟೇಷನ್ನುಗಳ ಸ್ಥಾಪನೆ ಬಗ್ಗೆ ಪೂರ್ವಬಾವಿ ಕ್ರಮಗಳನ್ನು ಜರುಗಿಸುತ್ತಿದೆ. ಹಣಕಾಸಿನ ವ್ಯವಸ್ಥೆ ಆಗಬೇಕಾಗಿರುತ್ತದೆ. ಹಣಕಾಸಿನ ವ್ಯವಸ್ಥೆ ಆದ ಕೂಡಲೇ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ಬೆಂಗಳೂರು - ಬೀದರ್ ನಡುವೆ ಐರಾವತ ಬಸ್ ಸಂಚಾರ

1395 (1739) ಶ್ರೀ ರಾಜೇಂದ್ರ ವರ್ಮ (ಹುಲಸೂರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ನಗರದಿಂದ ರಾಜ್ಯದ ಯಾವ ಯಾವ ಸ್ಥಳಗಳಿಗೆ ಐರಾವತ / ವೋಲ್ವೋ ಬಸ್ ಸಂಚಾರವನ್ನು ಪ್ರಾರಂಭಿಸಲಾಗಿದೆ;

ಆ) ಬೆಂಗಳೂರು ಮತ್ತು ಬೀದರ್ ನಡುವೆ ಐರಾವತ / ವೋಲ್ವೋ ಬಸ್ ಸಂಚಾರವನ್ನು ಪ್ರಾರಂಭಿಸಲಾಗಿದೆಯೇ;

ಇ) ಬೆಂಗಳೂರು ಬೀದರ್ ಮಾರ್ಗವಾಗಿ ಈಗ ಸಂಚರಿಸುವ ಬಹುತೇಕ ಬಸ್ಸುಗಳು ಅಂತರ ರಾಜ್ಯವಾದ ಆಂಧ್ರ ಪ್ರದೇಶದ ಮೂಲಕ ಸಂಚರಿಸುತ್ತಿದ್ದು, ಈ ಮಾರ್ಗವು ಉತ್ತಮವಾದ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಈ ಮಾರ್ಗದಲ್ಲಿ 2 + 1 ಆಸನಗಳ ಐರಾವತ / ವೋಲ್ವೋ ಬಸ್ ಸಂಚಾರವನ್ನು ಪ್ರಾರಂಭಿಸಿದಲ್ಲಿ ಎಲ್ಲಡೂ ರಾಜ್ಯದ ಪ್ರಯಾಣಿಕರಿಗೆ ಅನುಕೂಲವಾಗುವುದಿಲ್ಲವೇ; ಹಾಗಿದ್ದಲ್ಲಿ ಎಷ್ಟು ಶೀಘ್ರವಾಗಿ ಬೆಂಗಳೂರು ಬೀದರ್ ಮಾರ್ಗದಲ್ಲಿ ಐರಾವತ / ವೋಲ್ವೋ ಬಸ್ ಸಂಚಾರವನ್ನು ಪ್ರಾರಂಭಿಸಲಾಗುವುದೇ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸ್ತುತ ಬೆಂಗಳೂರು ನಗರದಿಂದ ತಿರುಪತಿ, ಹೈದ್ರಾಬಾದ್ ಮತ್ತು ಮುಂಬೈಗೆ ವೋಲ್ವೋ ಬಸ್ಸು ಕಾರ್ಯಾಚರಣೆಗೊಳಿಸುತ್ತಿದೆ.

ಆ) ಇಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರಸ್ತುತ ಕಾರ್ಯಾಚರಣೆಗೊಳಿಸುತ್ತಿದ್ದು, ಐರಾವತ/ ವೋಲ್ವೋ ಬಸ್ಸುಗಳಲ್ಲಿ ಆಸನದ ವಿನ್ಯಾಸವು 2+2 ಆಗಿರುತ್ತದೆ ಬೆಂಗಳೂರು - ಬೀದರ್ ಮಾರ್ಗದಲ್ಲಿ ವೋಲ್ವೋ ಬಸ್ ಪ್ರಾರಂಭ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಶಾಮಂದಿರ ಯೋಜನೆ

1399 (1746) ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸ್ವಂತ ಮನೆ ಹೊಂದಿ, ಆಶಾ ಮಂದಿರ ಯೋಜನೆಯಡಿ ಇಲ್ಲಿಯವರೆಗೂ ಎಷ್ಟು ಮನೆಗಳು ನಿರ್ಮಾಣ ಕಾರ್ಯ ಕೈಗೊಳ್ಳಲಾಗಿತ್ತು;

ಆ) ಎಂದಿನಿಂದ ಕಾಮಗಾರಿಗಳು ಪ್ರಾರಂಭಗೊಂಡಿವೆ; ಎಷ್ಟು ಮನೆಗಳು ಪೂರ್ಣಗೊಂಡಿವೆ; ಎಷ್ಟು ಮನೆಗಳ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ; ಅರ್ಧಕ್ಕೆ ನಿಲ್ಲಲು ಕಾರಣವೇನು;

ಇ) ಈ ಯೋಜನೆಯ ಮೂಲ ಯೋಜನೆಯ ಮೊತ್ತ ಎಷ್ಟು; ಎಷ್ಟು ಹಣವನ್ನು ಫಲಾನುಭವಿಗಳಿಂದ ಸಂಗ್ರಹಿಸಲಾಗಿದೆ; ಎಷ್ಟು ಸಮಯದೊಳಗೆ ಕಾಮಗಾರಿ ಮುಗಿಸಿ, ವಾಸಕ್ಕೆ ಯೋಗ್ಯವಾಗಿ ಫಲಾನುಭವಿಗಳಿಗೆ ನೀಡುತ್ತೇವೆಂಬ ಒಪ್ಪಂದಕ್ಕೆ ಬರಲಾಗಿತ್ತು;

ಈ) ಈ ಒಪ್ಪಂದದಂತೆ ಎಷ್ಟು ಪ್ರಕರಣಗಳಲ್ಲಿ ನಿಗದಿತ ಸಮಯದೊಳಗೆ ಗುಣಾತ್ಮಕ ಕಾಮಗಾರಿಗಳ ಮನೆ ನೀಡಲಾಗಿದೆ;

ಉ) ಎಷ್ಟು ಪ್ರಕರಣಗಳಲ್ಲಿ ಫಲಾನುಭವಿಗಳಿಂದ ಹೆಚ್ಚುವರಿ ಹಣ ಹೆಚ್ಚುವರಿ ಹಣಕ್ಕೆ ಬಡ್ಡಿ ಪಡೆಯಲು ನಿರ್ಧರಿಸಲಾಗಿದೆ; (ವಿವರ ನೀಡುವುದು);

ಊ) ಅಕ್ರಮವಾಗಿ ವಸೂಲಿ ಮಾಡಿದ ಹೆಚ್ಚುವರಿ ಹಣ ಹಗೂ ಮನೆಗಳ (ಕಾಮಗಾರಿಗಳ) ಅಕ್ರಮಗಳ ತನಿಖೆಗಾಗಿ ನಗರಾಭಿವೃದ್ಧಿ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ನಿಜವೇ; ಸಮಿತಿ ನೀಡಿರುವ ವರದಿ ಏನು. ವರದಿಯನ್ನು ಅನುಷ್ಠಾನಗೊಳಿಸಲಾಗಿದೆಯೇ;

ಋ) ಅರ್ಧ ನಿರ್ಮಾಣದಲ್ಲಿ ನಿಂತಿರುವ ಮನೆಗಳನ್ನು ವಿಲೇವಾರಿ ಮಾಡುವ ಬಗ್ಗೆ ಹಾಗೂ ಹಣ ಕಟ್ಟಿ ಕಾಯುತ್ತಿರುವ ಫಲಾನುಭವಿಗಳಿಗೆ ನ್ಯಾಯ ದೊರಕಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;